ನಾವು ಹಾಗೆ ಹೇಳುತ್ತೇವೆ. ಇದೊಂದು ರೀತಿಯಲ್ಲಿ ಮನುಷ್ಯ ತನ್ನ ನಡವಳಿಕೆಯ ಮೂಲಕ ಗಳಿಸಿಕೊಳ್ಳುವ ಅರ್ಹತೆಯೂ ಹೌದು. ಹೀಗಾಗಿ, ದೇವರೆಂದರೆ ಆಡಂಬರದ ಆಚರಣೆಯಲ್ಲ; ಅಳವಡಿಸಿಕೊಳ್ಳಬೇಕಾದ ಕೆಲವು ಇತ್ಯಾತ್ಮಕ ಗುಣಗಳು'.

ಮನುಷ್ಯ–ಪ್ರಕೃತಿ, ಮನುಷ್ಯ–ಕಾಲ, ಮನುಷ್ಯ–ದೈವ, ಮನುಷ್ಯ–ಚರಿತ್ರೆ, ಮನುಷ್ಯ–ನಾಗರಿಕತೆ... ಹೀಗೆ ಹಲವು ನೆಲೆಗಳಲ್ಲಿ ಮನುಷ್ಯನನ್ನಿಟ್ಟು ನೋಡುವ ಪ್ರಯತ್ನವನ್ನು ಕಣವಿಯವರು ತಮ್ಮ ಕವಿತೆಗಳಲ್ಲಿ ಮಾಡಿದ್ದಾರೆ. ಋತುಸಂಸಾರ, ಕಾಲಾತೀತ, ಮಣ್ಣಿನ ಮೆರವಣಿಗೆ, ಕೊನೆಯ ನಿಲ್ದಾಣ, ಚಿರಂತನ ದಾಹ, ಕಾಲ ನಿಲ್ಲುವುದಿಲ್ಲ, ನೆಲಮುಗಿಲು – ಇಂತಹ ಇನ್ನೂ ಅನೇಕ ಕವಿತೆಗಳು ನೆನಪಾಗುತ್ತಿವೆ. 'ಹಂಗರಹಳ್ಳಿ! ಹ್ಯಾಂಗ ತಡಕೊಂಡೆ ಕರುಳಿನಲಿ / ಉರಿಸಿದ ಕೊಳ್ಳಿ?' – ಕಣವಿಯವರ ಈ ಪ್ರಶ್ನೆ ಸಂವೇದನಾಶೀಲ ಮನಸ್ಸುಗಳನ್ನು ನಿರಂತರ ಕಾಡುವ ಪ್ರಶ್ನೆ. 'ಮಗಮಗಿಸುವ ಹೂವ ಸುತ್ತ ಧಗಧಗಿಸುವ ಉರಿ / ಶುಭ ನುಡಿಯುವ ಹಕ್ಕಿಗಳಿಗೆ ಬಂದೂಕಿನ ಗುರಿ / ಬಾಂಬಿಗಿಂತ ಬಲವತ್ತರ ದ್ವೇಷದೊಂದು ಕಿಡಿ / ಒಳಗೊಳಗೇ ಹೊತ್ತಿ ಹೊಗೆದು ಬತ್ತಿ ಬಾಳ ಕುಡಿ' ಇದು ಇಂದಿನ ಪರಿಸ್ಥಿತಿ. ಭಾವಗೀತಾತ್ಮಕ ಪ್ರತಿಭೆಯ ಕಣವಿಯವರಿಗೆ ಈ ಕಟುವಾಸ್ತವದ ಅರಿವಿತ್ತು. ಇದರ ತೀಕ್ಷ್ಣತೆ ಬದುಕಿನ ಸೂಕ್ಷ್ಮ ಚೆಲುವನ್ನು ನಾಶ ಮಾಡಿಬಿಡುವುದು ಆಧುನಿಕ ಬದುಕಿನ ದುರಂತವೆಂಬುದನ್ನೂ ಅವರು ಬಲ್ಲವರಾಗಿದ್ದರು. ಸ್ವಾತಂತ್ರ್ಯೋತ್ತರ ಬದುಕಿನಲ್ಲಿ ನಾವು ಇಂತಹ ಕಾವ್ಯ ರಚನೆಯನ್ನೇ ವಿಶೇಷವಾಗಿ ಕಾಣುತ್ತೇವೆ. ಇಂತಹ ಹುಲುಸು ಬೆಳೆಯಲ್ಲಿ ಮುಖ್ಯ ರಂಗದಿಂದ ದೂರ ಸರಿದ ಭಾವ ಜಗತ್ತಿನ ಅನುಭವ ಲೋಕಗಳನ್ನು ಕಣವಿಯವರು ಅದರ ಎಲ್ಲ ಸೂಕ್ಷ್ಮಗಳೊಂದಿಗೆ ಅನಾವರಣಗೊಳಿಸಿದರೆಂಬುದು ಅತ್ಯಂತ ಮಹತ್ವದ ಸಂಗತಿ. ಈ ಬದುಕಿನ ಕರಾಳತೆಯ ನಡುವೆಯೂ 'ಬತ್ತದಿಹುದು ಚೆಲುವಿನೂಟೆ ನೆಲದ ಒಡಲೊಳೆಂದಿಗೂ' ಎಂದು ಹಾಡಲು ಸಾಧ್ಯವಾಗುವ ಶಕ್ತಿಯನ್ನು ಕಣವಿಯವರು ಕಡೆಯವರೆಗೂ ಕಾಯ್ದುಕೊಂಡಿದ್ದರು. ಭರವಸೆಗಳನ್ನು ಕಳೆದುಕೊಂಡ ಪರಿಸರದಲ್ಲಿ ಇಂತಹ ಆಶಾವಾದವನ್ನು ಲೋಲುಪವಾಗದಂತೆ ಪ್ರತಿಪಾದಿಸಿದ ಕಣವಿಯವರು ನಿಸ್ಸಂದೇಹವಾಗಿ ನಮ್ಮ ಕಾಲದ ವಿಶಿಷ್ಟ ಪ್ರತಿಭೆ. ನಾಡವರ ಪರವಾಗಿ ಅವರಿಗೆ ಗೌರವಪೂರ್ವಕ ನಮನಗಳು.

ಚಿತ್ರಗಳು: ಮಯೂರ ಸಂಗ್ರಹ

### ನರಹಳ್ಳಿ ಬಾಲಸುಬ್ರಮಣ್ಯ

ಕನ್ನಡದ ಮುಖ್ಯ ವಿಮರ್ಶಕ, ಅನುವಾದಕ ಮತ್ತು ಪ್ರಬಂಧಕಾರ. ಮಂಡ್ಯ ಜಿಲ್ಲೆಯ ನರಹಳ್ಳಿಯವರು. ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ನಿವೃತ್ತರು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ವಿಮರ್ಶೆಯ ಕೃತಿಗಳು: 'ಅನುಸಂಧಾನ', 'ನವ್ಯತೆ', 'ಇಹದ ಪರಿಮಳದ ಹಾದಿ', 'ಸಾಹಿತ್ಯ ಸಂಸ್ಕೃತಿ', 'ಹಣತೆಯ ಹಾಡು', 'ನೆಲ ಸಂಸ್ಕೃತಿ', 'ಸಂಸ್ಕೃತಿ ಪಥ', 'ಬಾ ಕುವೆಂಪು ದರ್ಶನಕೆ', 'ಪದಸೋಪಾನ', 'ಸ್ವಾಯತ್ತ ಪ್ರಜ್ಞೆ'. ಪ್ರಬಂಧ ಸಂಕಲನಗಳು: 'ಅಂತರಂಗದ ಮೃದಂಗ', 'ಜೀವದಾಯಿನಿ'. ಅನುವಾದಿತ ಕೃತಿಗಳು: ಸಿಂಗರ್ ಕಥೆಗಳು (ಐಸಾಕ್ ಬಾಷೆವಿಸ್ ಸಿಂಗರ್ ಕತೆಗಳು), ಮಾರ್ಕ್ವೆಜ್ ಕಥೆಗಳು (ಗೇಬ್ರಿಯಲ್ ಗಾರ್ಸಿಯ ಮಾರ್ಕ್ವೆಜ್ ಕತೆಗಳು). ಕಡಿದಾದ ಹಾದಿ (ಆಂದ್ರೆಜೀದ್ ಕಾದಂಬರಿ). ಇವುಗಳ ಜೊತೆಗೆ ಕೆಲವು ಕೃತಿಗಳನ್ನು ಸಂಪಾದಿಸಿದ್ದಾರೆ.